# ಸಹಜವಾಗಿರಲಿ ಮಕ್ಕಳ ವ್ಯಕ್ತಿತ್ವ ಬೇಡ 'ಹೆಲಿಕಾಪ್ಟರ್ ಪೋಷಕತ್ವ'

**ಮಕ್ಕಳ ಮೇಲೆ ಅತಿಯಾಗಿ ಒತ್ತಡ ಹೇರುವುದು ಅವರ ಪರಿಪೂರ್ಣ ಬೆಳವಣಿಗೆಗೆ ಮಾರಕ. ಈ ರೀತಿಯ ಪೋಷಕತ್ವ ಮಕ್ಕಳಿಗೆ ಅಗತ್ಯವೇ ಇಲ್ಲ; ಅನಿವಾರ್ಯವೂ ಅಲ್ಲ. ಮಕ್ಕಳ ಪ್ರತಿಭೆಯನ್ನು ಹೊರಚೆಲ್ಲಲು ಪೋಷಕರು ಪೂರಕವಾಗಿರಬೇಕೇ ಹೊರತು ಹೆತ್ತವರೇ ಮಕ್ಕಳ ಪ್ರತಿಭೆಯನ್ನು ಹೊರಹಾಕುವಂತಾಗಬಾರದು.**

■ ಡಾ. ಮುರಲೀ ಮೋಹನ್ ಚೂಂತಾರು
ಚಿತ್ರ: ಡಾ.ಎಂ.ಡಿ. ಸೂರ್ಯಕಾಂತ



ಮಕ್ಕಳನ್ನು ಬೆಳೆಸುವುದು ಅತಿ ಸುಲಭದ ಕೆಲಸವಲ್ಲ ಎಂಬ ಕಟು ಸತ್ಯ ಎಲ್ಲ ಹೆತ್ತವರಿಗೂ ಗೊತ್ತಿದೆ. ಹಾಗೆಂದ ಮಾತ್ರಕ್ಕೆ ಮಕ್ಕಳನ್ನು ಸಾಕಿ ಸಲಹಿ ಸಂಸ್ಕಾರವಂತರನ್ನಾಗಿ, ವಿದ್ಯಾವಂತರನ್ನಾಗಿ ಮಾಡುವುದು ಕಬ್ಬಿಣದ ಕಡಲೆಯೂ ಅಲ್ಲ ಎಂಬುದನ್ನೂ ಹೆತ್ತವರು ಅರಿಯಬೇಕು. ಇತ್ತೀಚಿನ ಸ್ಪರ್ಧಾತ್ಮಕವಾದ ಜಗತ್ತಿನಲ್ಲಿ ಪ್ರತಿಯೊಬ್ಬ ಹೆತ್ತವರು ತನ್ನ ಮಕ್ಕಳು ಎಲ್ಲರಿಗಿಂತ ಮುಂದೆ ಇರಬೇಕು ಎಂದು ಬಯಸುವುದು ಸಹಜವೇ. ಆದರೆ ಅದಕ್ಕೆ ಬೇಕಾಗಿ ಮುಗ್ಧ ಮಗುವಿನ ಮೇಲೆ ಇನ್ನಿಲ್ಲದ ಒತ್ತಡ ಹಾಕಿದಲ್ಲಿ ಮಗುವಿನ ಮನಸ್ಸಿನ ಮೇಲೆ ಋಣಾತ್ಮಕ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಇತ್ತೀಚಿನ ಸಂಶೋಧನೆಗಳು ತಿಳಿಸುತ್ತಿವೆ.

ಅಮೆರಿಕದ ಮಿನಿಸೋಟ ವಿಶ್ವವಿದ್ಯಾಲಯದಲ್ಲಿ ಸಂಶೋಧಕರಾಗಿರುವ ಡಾ. ನಿಕೋಲ್ ಪೆರ್ರಿ ಅವರ ಪ್ರಕಾರ ಅತಿಯಾದ ಉಸಿರುಗಟ್ಟುವ ಪೋಷಕತ್ವದಿಂದ ಮಗುವಿನ ಮೇಲೆ ಭಾವನಾತ್ಮಕ ಪರಿಣಾಮ ಬೀರಿ ತನ್ನ ಭಾವನೆಗಳನ್ನು ನಿಯಂತ್ರಿಸುವಲ್ಲಿ ವಿಫಲವಾಗುತ್ತದೆ.

## ಏನಿದು ಹೆಲಿಕಾಪ್ಟರ್ ಪೋಷಕತ್ವ?

ಸದಾ ಮಗುವಿನ ಸುತ್ತ ಗಿರಾಕಿ ಹೊಡೆಯುತ್ತಾ ಪ್ರತಿಯೊಂದು ಸಣ್ಣ ವಿಚಾರಕ್ಕೂ ಮಗುವಿಗೆ ಸ್ವಾತಂತ್ರ್ಯ ನೀಡದೆ ಸದಾ ಕಾಲ ಮಗುವಿನ ಮೇಲೆ ಗಮನವಿಟ್ಟು ಹೆತ್ತವರೇ ನಿರ್ಧಾರ ತೆಗೆದುಕೊಳ್ಳುವ ನಡವಳಿಕೆಯನ್ನು 'ಹೆಲಿಕಾಪ್ಟರ್ ಪೋಷಕತ್ವ' ಎನ್ನುತ್ತಾರೆ. ಹೇಗೆ ಹೆಲಿಕಾಪ್ಟರ್ ಅಥವಾ ವಿಮಾನ ನಮ್ಮ ತಲೆ ಮೇಲೆ ಸುತ್ತುತ್ತಾ ಹಾರಾಡುತ್ತದೆಯೋ ಮತ್ತು ನಾವು ಹೋದೆಡೆಯೆಲ್ಲಾ ನಮ್ಮ ತಲೆ ಮೇಲೆ ಹಾರಾಡಿದಂತೆ ಅನಿಸುತ್ತದೆಯೋ ಅದೇ ರೀತಿ ಈ ಹೆಲಿಕಾಪ್ಟರ್ ಪೋಷಕತ್ವವು ಅಷ್ಟೆ. ಮಗು ಯಾವತ್ತೂ ತನ್ನ ಹೆತ್ತವರು ತನ್ನನ್ನು